# ‘ಜೈ ಹೊ’ ಜೋಯಾ!



ಈ ಸಲ ಜೋಯಾ ಅಖ್ತರ್ ಗೆದ್ದಿದ್ದಾಳೆ. ಆಕೆಯ ನಿರ್ದೇಶನದ ಎರಡನೇ ಚಿತ್ರ ‘ಜಿಂದಗಿ ನ ಮಿಲೆ ದುಬಾರಾ’ ವಿಮರ್ಶಕರ ಮೆಚ್ಚುಗೆ ಗಳಿಸಿದೆ ಮಾತ್ರವಲ್ಲ, ಬಾಕ್ಸಾಫೀಸ್‌ನಲ್ಲೂ ಸಾಕಷ್ಟು ದುಡ್ಡು ಬಾಚಿದೆ. ಎರಡು ವರ್ಷಗಳ ಹಿಂದೆ ಈಕೆ ನಿರ್ದೇಶಿಸಿದ ಮೊದಲ ಚಿತ್ರ ‘ಲಕ್ ಬೈ ಚಾನ್ಸ್’ ವಿಮರ್ಶಕರ ಭಾರೀ ಮೆಚ್ಚುಗೆ ಗಳಿಸಿದ್ದರೂ ಥಿಯೇಟರ್‌ನಲ್ಲಿ ಪ್ರೇಕ್ಷಕರನ್ನು ಆಕರ್ಷಿಸಲು ವಿಫಲವಾಗಿತ್ತು. ಆ ಹಿನ್ನೆಲೆಯಲ್ಲಿ ಈ ನಿರ್ದೇಶಕಿಗೆ ‘ಜಿಂದಗಿ..’ ವೃತ್ತಿಜೀವನದ ಮಹತ್ವದ ತಿರುವಾಗಿತ್ತು.

ಮೂವರು ಗೆಳೆಯರು ತಮ್ಮ ಬ್ಯಾಚುಲರ್ ಜೀವನದ ಕೊನೆಯ ಪ್ರವಾಸ ಹೊರಡುವುದು ಚಿತ್ರದ ಕಥೆ. ಅದರಲ್ಲಿ ಒಬ್ಬನಿಗೆ ಆಗಲೇ ವಿವಾಹ ನಿಶ್ಚಯವಾಗಿದೆ. ಇನ್ನಿಬ್ಬರಲ್ಲಿ ಒಬ್ಬ ಚೆಲ್ಲು ಚೆಲ್ಲು; ಇನ್ನೊಬ್ಬ ಗಂಭೀರ. ಸುಂದರ ಸ್ಪೈನ್ ದೇಶದಲ್ಲಿ ಸುತ್ತಾಡುತ್ತಾ ಹೋದಂತೆ ಗೆಳೆಯರ ಜೀವನದಲ್ಲಿ ಇನ್ನಿಬ್ಬರು ಗೆಳತಿಯರು ಪ್ರವೇಶ ಪಡೆಯುತ್ತಾರೆ. ಸಮುದ್ರದಾಳದಲ್ಲಿ ಮತ್ತು ಆಕಾಶದ ಕೆಳಗೆ ಕ್ಯಾಮೆರಾ ಸುತ್ತಾಡಿರುವ ಪರಿ ಒಂದೆಡೆಯಾದರೆ; ವ್ಯಕ್ತಿಯ ಸುತ್ತಲಿನ ಖಾಸಗೀ ಪರಿಧಿಯ ಕುರಿತ ಚಿಂತನೆ ಇನ್ನೊಂದು ನೆಲೆಯಲ್ಲಿ ಪ್ರೇಕ್ಷಕರನ್ನು ಹಿಡಿದಿಡುತ್ತದೆ. ಹೊಸ ತಲೆಮಾರಿನ ಹೊಸ ವ್ಯಕ್ತಿತ್ವಗಳ ಶೋಧದ ಕಥೆ ಕಚಗುಳಿಯಿಡುತ್ತಾ ಸಾಗುತ್ತದೆ.

ಪೆಪ್ಸಿ, ಫಿನೊಲೆಕ್ಸ್– ಮುಂತಾದ ಕಮರ್ಷಿಯಲ್ ಆ್ಯಡ್‌ಗಳನ್ನು ಮಾಡುತ್ತಾ ರಂಗಪ್ರವೇಶ ಮಾಡಿದ ಜೋಯಾ, ಖ್ಯಾತ ಚಿತ್ರ ಸಾಹಿತಿ ಜಾವೇದ್ ಅಖ್ತರ್ ಮಗಳು. ತಾಯಿ ಹನಿ ಇರಾನಿ. ನಟ– ನಿರ್ದೇಶಕ ಫರ್ಹಾನ್ ಅಖ್ತರ್‌ನ ಅವಳಿ ಸೋದರಿ ಈಕೆ. ಕುಟುಂಬದ ಸಿನಿಮಾ ಹಿನ್ನೆಲೆಯೂ ಈಕೆಯ ವೃತ್ತಿನೈಪುಣ್ಯತೆಯಲ್ಲಿ ನೆರವಿಗೆ ಬಂದಂತಿದೆ.

ಈ ಹಿಂದೆ ದಿಲ್ ಚಾಹ್ತಾ ಹೈ, ಲಕ್ಷ್ಯ ಮತ್ತು ಬಾಂಬೆ ಬಾಯ್ಸ್– ಈ ಮೂರು ಚಿತ್ರಗಳಿಗೆ ಸಹಾಯಕ ನಿರ್ದೇಶಕಿಯಾಗಿ ದುಡಿದಿರುವ ಜೋಯಾ, ‘ಜಿಂದಗಿ ನ ಮಿಲೆ ದುಬಾರಾ’ ಚಿತ್ರದಲ್ಲಿ ನಿರ್ದೇಶಕಿಯಾಗಿ ಪ್ರಬುದ್ಧತೆ ಮೆರೆದಿದ್ದಾರೆ. ಮುಂಬೈ ಸೈಂಟ್ ಕ್ಸೇವಿಯರ್‌ನ ಈ ಕಲಾ ಪದವೀಧರೆ, ಆ ಬಳಿಕ ನ್ಯೂಯಾರ್ಕ್ ವಿಶ್ವವಿದ್ಯಾಲಯದ ಫಿಲಂ ಸ್ಕೂಲ್‌ನಲ್ಲಿ ಕಲಿತದ್ದು ವೃತ್ತಿಯ ಸಾಧನೆಗೆ ಪೂರಕವಾಗಿದೆ. ಇನ್ನೂ 27ರ ಹರೆಯದ ಈ ಹುಡುಗಿ ಬಾಲಿವುಡ್‌ನ ಹೊಸ ನಿರ್ದೇಶಕಿಯರ ದಂಡಿನ ಮುಂಚೂಣಿಗೆ ಬಂದಿದ್ದಾಳೆ.

■ ಬಿಂದು

